# ಮಲ್ಲೈಕಾ ಖುಷ್ ಹುವಾ



ಶಿಲ್ಪಾ ಶೆಟ್ಟಿ, ರಿತೇಶ್ ದೇಶ್‌ಮುಖ್, ಜೆನೆಲಿಯಾ ಮತ್ತು ಜಾಕ್ವೆಲಿನ್ ಫೆರ್ನಾಂಡಿಸ್ ಎಲ್ಲರೂ ‘ಟಿಕ್ ಟಾಕ್’ ಪ್ರಿಯರೇ. ಭಾರತ ಸರ್ಕಾರ ಈಗ ಟಿಕ್ ಟಾಕ್‌ಅನ್ನು ನಿಷೇಧಿಸಿದ ಬಳಿಕ ಇವರೆಲ್ಲ ಏನು ಮಾಡುತ್ತಾರೋ ಗೊತ್ತಿಲ್ಲ. ಆದರೆ ಬಾಲಿವುಡ್‌ನ ‘ಮುನ್ನೀ ಬದ್ನಾಮ್’ ತಾರೆ ಮಲ್ಲೈಕಾ ಅರೋರಾ ಮಾತ್ರ ಸರ್ಕಾರದ ಈ ನಿರ್ಧಾರದಿಂದ ಖುಷ್ ಆಗಿದ್ದಾರಂತೆ! ‘ಒಳ್ಳೆಯದಾಯಿತು, ಯಾರು ಯಾರೋ ಟಿಕ್ ಟಾಕ್ ನಲ್ಲಿ ಬಂದು ಮನಸ್ಸಿಗೆ ಅನ್ನಿಸಿದ್ದನ್ನೆಲ್ಲಾ ಮಾಡುತ್ತಿದ್ದಾರೆ. ನಿಷೇಧ ಮಾಡಿದ್ದಲಿಂದಾದರೂ ಈ ಕಿರಿಕಿರಿ ನಿಲ್ಲಲಿ’ ಎನ್ನುವುದು ಮಲ್ಲೈಕಾ ಉವಾಚ. ‘ಲಾಕ್‌ಡೌನ್ ಅವಧಿಯಲ್ಲಿ ನಾನು ಓದಿದ ಅತ್ಯುತ್ತಮ ಸುದ್ದಿಯಿದು’ ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಆಕೆ ಬರೆದುಕೊಂಡಿದ್ದಾರೆ.

ಲಾಕ್‌ಡೌನ್ ಅವಧಿಯಲ್ಲಿ ಮಲ್ಲೈಕಾರ ಗೆಳತಿಯರ ಗುಂಪಿನ ಚಟುವಟಿಕೆಗಳಿಗೆ ತೆರೆ ಬಿದ್ದದ್ದು ಇನ್ನೊಂದು ಕಥೆ. ಬಾಲಿವುಡ್‌ನಲ್ಲಿ ಮಲ್ಲೈಕಾ ಮನೆಯ ಲೇಡಿಸ್ ಪಾರ್ಟಿ ಸುಪ್ರಸಿದ್ಧ. ಕರೀನಾ ಕಪೂರ್, ಕರಿಷ್ಮಾ ಕಪೂರ್, ಅಮೃತಾ ಆರೋರಾ ಮತ್ತು ಮಲ್ಲಿಕಾ ಭಟ್ ಈ ಲೇಡೀಸ್ ಪಾರ್ಟಿಯ ಪರ್ಮನೆಂಟ್ ಸದಸ್ಯರು. ಬಾಲಿವುಡ್‌ನ ಹಲವಾರು ಗಾಸಿಪ್‌ಗಳು ಈ ಪಾರ್ಟಿಯಿಂದಲೇ ಹೊರಡುತ್ತಿತ್ತು ಎನ್ನುವುದು ಮಲ್ಲೈಕಾಗೆ ಆಗದವರ ಕುಹಕ! ‘ಇನ್‌ಸ್ಟಾಗ್ರಾಮ್’ನಲ್ಲಿ ಹಿಂದಿನ ಪಾರ್ಟಿಯೊಂದರ ಚಿತ್ರವೊಂದನ್ನು ಹಾಕಿರುವ ಮಲ್ಲೈಕಾ, ‘ನಿಜಕ್ಕೂ ಬೇಜಾರಾಗುತ್ತಿದೆ. ಲಾಕ್‌ಡೌನ್‌ನಿಂದಾಗಿ ನಮ್ಮ ಭೇಟಿಗಳೇ ನಿಂತುಹೋಗಿವೆ’ ಎಂದಿದ್ದಾರೆ ಮಲ್ಲೈಕಾ. ಅಂದ ಹಾಗೆ ಆಕೆಯ ಕಟ್ಟಡದಲ್ಲಿ ಕೆಲಸದಾಕೆಯೊಬ್ಬರಿಗೆ ಕೊರೊನಾ ಪಾಸಿಟಿವ್ ಕಾಣಿಸಿಕೊಂಡು ಬಿಲ್ಡಿಂಗನ್ನು ಜೂನ್ ಮೊದಲ ವಾರ ಸೀಲ್‌ಡೌನ್ ಮಾಡಿದ್ದೂ ಸುದ್ದಿಯಾಗಿತ್ತು. ■

# ‘ಗ್ಲೋಬಲ್’ ಪ್ರಿಯಾಂಕಾ



ಪ್ರಿಯಾಂಕಾ ಚೋಪ್ರಾ ಚಿತ್ರರಂಗಕ್ಕೆ ಬಂದು 20 ವರ್ಷಗಳಾದವು. ಸುಮಾರು 60 ಸಿನಿಮಾಗಳಾದವು. ಆಕೆ ಈಗ ಬಾಲಿವುಡ್ ಮತ್ತು ಹಾಲಿವುಡ್ ಎರಡೂ ಕಡೆ ಪ್ರಭಾವಶಾಲಿ ಸೆಲೆಬ್ರಿಟಿ. ನಟಿಯಾಗಿ ಚಿತ್ರರಂಗಕ್ಕೆ ಬಂದ ಪ್ರಿಯಾಂಕಾ ನಿರ್ಮಾಪಕಿಯಾಗಿಯೂ ಈಗ ದೊಡ್ಡ ಹೆಸರು ಪಡೆಯಲು ಹೊರಟಿದ್ದಾರೆ. ಆಕೆಯ ಪ್ರೊಡಕ್ಷನ್ ಹೌಸ್, ‘ಪರ್ಪಲ್ ಪೆಬಲ್ ಪಿಕ್ಚರ್ಸ್’ ಜಾಗತಿಕ ಮಟ್ಟದಲ್ಲಿ ಅಮೆಜಾನ್ ಜೊತೆ ಒಪ್ಪಂದವೊಂದಕ್ಕೆ ಸಹಿ ಹಾಕಿದೆ. ಈ ಒಪ್ಪಂದದನ್ವಯ ಶೀಘ್ರವೇ ಆಕೆ ಹಿಂದಿ ಮತ್ತು ಜಗತ್ತಿನ ಅನೇಕ ಭಾಷೆಗಳಲ್ಲಿ ಹೊಸ ಪ್ರಯೋಗಗಳನ್ನು ಮಾಡಲು ಯೋಜನೆ ರೂಪಿಸುತ್ತಿದ್ದಾರೆ. ಎರಡು ವರ್ಷಗಳ ಈ ಒಪ್ಪಂದಕ್ಕೆ ಎಷ್ಟು ಮಿಲಿಯನ್ ಡಾಲರ್ ಕೈಬದಲಾಯಿಸಿದೆ ಎನ್ನುವುದು ಸ್ಪಷ್ಟವಾಗಿಲ್ಲ. ಆದರೆ ಪ್ರಿಯಾಂಕಾ ಅವರ ಪ್ರೊಡಕ್ಷನ್ ಹೌಸ್ ದೊಡ್ಡ ಮಟ್ಟದಲ್ಲಿ ಇಂಗ್ಲಿಷ್, ಹಿಂದಿ ಸಿನಿಮಾಗಳನ್ನು ಮತ್ತು ಟೀವಿ ಶೋಗಳನ್ನು ನಿರ್ಮಿಸುವುದು ಖಚಿತವಾಗಿದೆ.

‘ಇದು ನನ್ನ ಬಹುವರ್ಷಗಳ ಕನಸು. ಜಗತ್ತಿನ ಎಲ್ಲ ದೇಶಗಳಿಂದ ಭಾಷೆ, ಗಡಿಗಳನ್ನು ಮೀರಿ ಪ್ರತಿಭೆಗಳು ಒಂದೇ ವೇದಿಕೆಯಲ್ಲಿ ಕೆಲಸ ಮಾಡಬೇಕು. ಜಗತ್ತಿನ ವಿವಿಧ ದೇಶಗಳಲ್ಲಿ ಇರುವ ಕಥೆಗಳು ಎಲ್ಲರಿಗೂ ಗೊತ್ತಾಗಬೇಕು. ನಾನೂ ಜಗತ್ತಿನ ಹಲವು ಭಾಷೆಗಳಲ್ಲಿ ನಟಿಸಬೇಕು’ ಎಂದಿದ್ದಾರೆ ಪ್ರಿಯಾಂಕಾ.

ಈಗಾಗಲೇ ಅಮೆಜಾನ್ ಸ್ಟುಡಿಯೊದ ಎರಡು ಯೋಜನೆಗಳಲ್ಲಿ ಪ್ರಿಯಾಂಕಾ ತೊಡಗಿಕೊಂಡಿದ್ದಾರೆ. ಅದರಲ್ಲಿ ಒಂದು ಹಿಂದಿ ಟೀವಿಗಾಗಿ ಚಿತ್ರಿಸುತ್ತಿರುವ ರಿಯಾಲಿಟಿ ಮ್ಯೂಸಿಕ್ ಶೋ ಸಂಗೀತ್. ಗಂಡ, ಅಮೆರಿಕದ ಜನಪ್ರಿಯ ಗಾಯಕ ನಿಕ್ ಜೊನಾಸ್ ಜೊತೆಗೂಡಿ ಈ ಶೋವನ್ನು ಪ್ರಿಯಾಂಕಾ ಸ್ವತಃ ನಿರ್ಮಿಸುತ್ತಿದ್ದಾರೆ. ಈ ಶೋದಲ್ಲಿ ಆಕೆಯ ಹೋಸ್ಟ್ ಕೂಡಾ ಹೌದು. ವಧು ಮತ್ತು ವರನ ಎರಡು ಗುಂಪುಗಳು ನಡೆಸುವ ಸ್ಪರ್ಧೆಯ ರೂಪದಲ್ಲಿ ಈ ಕಾರ್ಯಕ್ರಮ ಇರುತ್ತದೆ. ಇನ್ನೊಂದು ‘ಆಂಟನಿ ಆಂಡ್ ಜೋ ರೂಸೋಸ್ ಸಿಟಡೆಲ್’ ಎನ್ನುವ ಇಂಗ್ಲಿಷ್ ಸಿನಿಮಾ. ‘ಗೇಮ್ಸ್ ಆಫ್ ಥ್ರೋನ್ಸ್’ ಮತ್ತು ‘ಬಾಡಿಗಾರ್ಡ್’ ಚಿತ್ರದ ಯಶಸ್ವೀ ಹೀರೊ ರಿಚರ್ಡ್ ಮ್ಯಾಡೆನ್ ಪ್ರಿಯಾಂಕಾ ಜೊತೆಗೆ ನಟಿಸುತ್ತಿದ್ದಾರೆ.

ತನ್ನ ಸಿನಿಮಾಗಳಲ್ಲಿ ಮುಖ್ಯವಾಗಿ ಹೆಣ್ಣುಮಕ್ಕಳ ಕಥೆಯನ್ನು ಹೇಳುವುದು ಪ್ರಿಯಾಂಕಾಗೆ ಇಷ್ಟವಂತೆ. ‘ಹಿಂದಿ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಕಾರ್ಯಕ್ರಮ ಮತ್ತು ಸಿನಿಮಾಗಳನ್ನು ನಿರ್ಮಿಸುತ್ತೇನೆ, ಜಗತ್ತಿನ ಬೇರೆ ಭಾಷೆಗಳಲ್ಲೂ ಚಿತ್ರಗಳನ್ನು ನಿರ್ಮಿಸುತ್ತೇನೆ. ಅಮೆಜಾನ್ ಜೊತೆಗೂಡಿರುವುದರಿಂದ ಜಗತ್ತಿನ ಯಾವುದೇ ಭಾಷೆಯ ವೀಕ್ಷಕರನ್ನೂ ತಲುಪುವುದು ಸುಲಭ’ ಎನ್ನುವುದು ಆಕೆಯ ಅಂಬೋಣ.

■ ಬಿಂದು